ಒಂದು ಕಾಲನ್ನು ಬಂಡೆಗೆ, ಇನ್ನೊಂದು ನೆಲಕ್ಕೆ ಅದುಮಿ – ಅಂತರಗಂಗೆಯ ನೀರು ಬಹಳ ಸಿಹಿ ಅಂದ. ಈ ಬೆಟ್ಟದ ಮೇಲೇಯೇ ಹತ್ತಾರು ಮನೆಗಳ ಒಂದು ಹಳ್ಳಿ ಇದೆ. ಅವರಿಗೆ ನಾಗರಿಕತೆಯ ಸಂಪರ್ಕವೇ ಇಲ್ಲ. ಇಲ್ಲಿ ವಿದ್ಯುದೀಪವೂ ಇಲ್ಲ. ರಾತ್ರಿಯೆಲ್ಲ ಬೆಟ್ಟದ ಮೂಲೆಮೂಲೆ ಸುತ್ತುವ ಅವರಿಗೆ ಕೇಳಿದರೆ ಹೇಳುತ್ತಾರೆ – ಚಂದಿರ ಇಲ್ಲದಿದ್ದರೆ ಕಾಲೇ ನಮಗೆ ಕಣ್ಣು! ಅಂತ. ಹೌ! ಬ್ಯುಟಿಫುಲ್ ಅಲ್ವ? ಅವರಿಗೆಷ್ಟೊಂದು ಧೈರ್ಯನೋಡಿ. ಕತ್ತಲೆಯಲ್ಲೂ ಅವರು ಯಾರಿಗೂ ಹೆದರುವುದಿಲ್ಲ. ಆದರೆ ಕೆಳಗಿಳಿದು ಹೋದರೆ ಅಲ್ಲಿದೆ ನೋಡಿ, ನಮ್ಮ ಪಟ್ಟಣ. ಅಲ್ಲಿ ಬೆಳಕಲ್ಲೂ ಒಬ್ಬರಿಗೊಬ್ಬರು ಹೆದರಿ, ನಂಬಿಕೆ ಕಳಕೊಂಡು ನಾವು ಬದುಕುತ್ತಿರುವ ಸಭ್ಯರ ಪಟ್ಟಣ. ಅಲ್ಲಿನ ಹಾಗೆ ಇಲ್ಲಿ– ಶಿಸ್ತು, ಫ್ಯಾಕ್ಟರಿಯ ಶಿಫ್ಟು, ಲೋಕಲ್ ಟ್ರೈನಿನ ಜಂಜಾಟವಿಲ್ಲ. ನಾವೆಲ್ಲ ನಾವಿಲ್ಲದಿದ್ದರೆ ಜಗತ್ತಿಲ್ಲ ಅಂದುಕೊಳ್ಳುತ್ತೇವಲ್ಲವೆ? ಇವರೂ ಇದ್ದಾರೆ – ಜಗತ್ತಿನರಿವಿರದೆ ತಮ್ಮ ಪಾಡಿಗೆ ತಾವು. ಇವರನ್ನು ಅಜ್ಞಾನಿಗಳೆಂದುಕೊಳ್ಳಬೇಡಿ. ಮತ್ತೆ ಇಲ್ಲಿ, ಆ ಹತ್ತಾರು ಮನೆಗಳಲ್ಲಿ ನೇಯುವ ಸೀರೆ –ಖಣಗಳು ಬಹಳ ಪ್ರಸಿದ್ಧಿ. ಅವರೇ ನೇಯ್ದದ್ದನ್ನು ಪಟ್ಟಣಕ್ಕೆ ಹೋಗಿ ಮಾರಿ ಬರುತ್ತಾರೆ. ಅವರಿಗೂ ದಲ್ಲಾಲಿಗಳು, ಮುಂಗಟ್ಟಿನ ವ್ಯಾಪಾರಿಗಳು ತಮ್ಮನ್ನು ಮೋಸ ಮಾಡುತ್ತಾರೆಂದು ಗೊತ್ತಿದೆ. ಆದರೂ ನಮಗಿಷ್ಟೇ ಸಾಕು – ಎಂದು ಬದುಕುತ್ತಿರುವವರು ಇವರು. ಪಟ್ಟಣದಿಂದ ಯಾರೇ ಬಂದು ಇವರ ಸೀರೆಗಳಿಗಾಗಿ ಠಿಕಾಣಿ ಹೂಡಿದರೂ ಇವರು ಸಹಿಸುವುದಿಲ್ಲ... ಎಂದು ಮಾತು ನಿಲ್ಲಿಸಿದ ಚೈತ್ರನಿಗೆ ಬಹಳ ಮಾತಾಡಿದೆ ಎನ್ನಿಸಿತು. ಹುಡುಗಿ ವೈಯಕ್ತಿಕ ನೋವಿನ ಭಾರದಲ್ಲಿ ನಲುಗಿದ್ದಾಳೆ. ಈಗವಳಿಗೆ ಇಂಥ ಮಾತು ಹಿಡಿಸೀತು – ಅಂದುಕೊಂಡು ಸಮಾಧಾನ ಮಾಡಿಕೊಂಡ. ಆಕೆ ನೀರಿನಿಂದ ಕಾಲುತೆಗೆದು ಪಕ್ಕಕ್ಕೆ ಬಂದಾಗ ಹೊತ್ತು ಮುಳುಗಿತು. ಅಮ್ಮ ಕಾಯುತ್ತಿರುತ್ತಾಳೆ. ಹೋಗೋಣವೇ – ಅಂದ. ಆಕೆಯ ಹಿಂದೆಹಿಂದೆ ಮೌನವಾಗಿ ಬೆಟ್ಟವನ್ನು ಇಳಿಯತೊಡಗಿದ...

★★★

ಕೇಳುತ್ತಿದ್ದೀಯ ಮಗಳೇ? ಹೆಣ್ಣಾಗಿ ಹುಟ್ಟುವುದಂದರೆ ಶಾಪವಲ್ಲದೆ ಮತ್ತೇನು? ಅದರ ನೋವು ಹೆರಿಗೆ ನೋವಿನ ಹಾಗೆ ಗಂಡಸರಿಗೆ ಗೊತ್ತಾಗುವುದಿಲ್ಲ. ನಾನು ನೋಡು – ಹೆಣಗಿಯೇ ಮುದಕಿಯಾಗಿಬಿಟ್ಟೆ. ಹಿಂದೆಲ್ಲ ಒಬ್ಬರಿಗಾಗಿ ಬದುಕಿದ್ದರೆ, ಈಗ ಇನ್ನೊಬ್ಬರಿಗಾಗಿ. ಈ ಮಗು ಹುಟ್ಟಿದಾಗ ನಾವು – ಗಂಡ ಹೆಂಡತಿ ಎಷ್ಟು ಸಂಭ್ರಮಪಟ್ಟೆವು ಗೊತ್ತೆ. ಇವನನ್ನು ಅದಾಗಿ ಮಾಡಬೇಕು, ಇದಾಗಿ ಮಾಡಬೇಕು ಅಂತೆಲ್ಲ. ಆದರೆ – ಆದದ್ದೇ ಬೇರೆಯದು ತಾಯಿ. ನಮ್ಮ ಮನೆಯವರು ಹಾಗೆ ಬಹಳ ಒಳ್ಳೆಯವರು. ಯಾವುದೋ ಸರ್ಕಾರಿ ಕೆಲಸದಲ್ಲಿದ್ದವರು. ನಾನೆಂಥ ದಡ್ಡಿ ಎಂದರೆ ಅವರು ಕೆಲಸ ಮಾಡುವ ಕಚೇರಿಯ ಹೆಸರೂ ತಿಳಿಯದವಳು. ನನಗೆ ತಿಳಿದದ್ದೆಲ್ಲ ನಮ್ಮಿಬ್ಬರ – ನನ್ನ ಪ್ರಪಂಚ. ಇಂಥ ಪ್ರಪಂಚದ ಒಂದು ಆಧಾರ ಥಟ್ಟನೆ ಕುಸಿದುಬಿದ್ದಾಗ ನಾನೇನು ಮಾಡಬೇಕು ಹೇಳು. ಈ ಮಗ ಏಳೋ–ಎಂಟೋ ವರ್ಷದ್ದು, ನಮ್ಮಿಬ್ಬರ ಜೀವವೆಲ್ಲ ಇವನ ಮೇಲೆ. ಅವರಾದರೂ ಇವನನ್ನು ಎಷ್ಟು ಹಚ್ಚಿಕೊಂಡಿದ್ದರು. ಮಗುವಾಗಿದ್ದಾಗ ತೊಡೆಯಮೇಲೆ, ಬೆಳೆದಾಗ ಬೆರಳ್ಹಿಡಿದು ಯಾವಾಗಲೂ ಜತೆಯಲ್ಲೇ ಕರೆದೊಯ್ಯುವರು. ಅವರಿಗೆ ಮನೆ, ಮಗ, ನಾನು ಎಂದರೆ ಬಹಳ ಪ್ರಾಣ. ಆದರೆ ಇದ್ದಕ್ಕಿದ್ದಂತೆ ಅವರಿಗೇನಾಯಿತು ಮಗಳೆ? ಒಂದು ದಿನ ಕಚೇರಿಗೆ ಹೋದವರು ಮರಳಲೇ ಇಲ್ಲ. ಎಲ್ಲಿ ಹೋದರೋ ಒಂದೂ ತಿಳಿಯಲಿಲ್ಲ, ನಾನು – ಒಂಟಿ ಹೆಂಗಸು ಈ ಮಗನನ್ನು ಬೆಳೆಸಿ, ನಾಲ್ಕಕ್ಷರ ಕಲಿಸಿ, ಹಾದಿಗೆ ಹತ್ತಿಸಬೇಕಾದರೆ ಸೋತುಹೋದೆ. ಆದರೂ